ಇವರೆಲ್ಲರೂ ಒಬ್ಬರನ್ನೊಬ್ಬರು ಅರಿತುಕೊಂಡಿರುವ ಮುಕ್ತಜೀವಿಗಳು ಎಂದುಕೊಂಡ ಅಭಿ, 'ಏಕವಚನದಲ್ಲಿ ಆತ್ಮೀಯತೆಯಿದೆ, ಸಂತೋಷವಿದೆ, ನಾವೆಲ್ಲರೂ ಒಂದು ಎಂಬ ಭಾವವಿದೆ, ನಿನ್ನಂಥವರು ಇಲ್ಲಿ ಎಷ್ಟು ಮಂದಿಯಿರಬಹುದು?' ಎಂದು ಕೇಳಿದ.

'ಎಲ್ಲರೂ ಎಂದರೆ ನಿನಗೆ ನಂಬಲು ಕಷ್ಟವಾಗಬಹುದು. ಏಕವಚನದಲ್ಲಿ ಏನಿದೆ ಎಂದು ಒಬ್ಬರಿಗೊಬ್ಬರು ಹೇಳುವಂಥ ಶಾಂತ ಆಂದೋಲನವನ್ನು ಐದು ವರ್ಷಗಳ ಹಿಂದೆ ಆರಂಭಿಸಿದವನು 'ಗುರು ಮೃಣ್ಮಯ' ಎಂಬ ತೊಂಬತ್ತು ವರ್ಷ ವಯಸ್ಸಿನ ಒಬ್ಬ ವ್ಯಕ್ತಿ'

'ಆತ ಈಗಲೂ ಇದ್ದಾನೆಯೆ?' ಅಭಿ ಕೇಳಿದ.

'ಇಲ್ಲ. ಜನರ ಅಪೇಕ್ಷೆಯಂತೆ ಆತನ ಗುರುತಾಗಿ 'ಗುರು ಮೃಣ್ಮಯ' ಎಂಬ ಕೆತ್ತನೆಯಿರುವ ಒಂದು ಕಾವಿ ಬಣ್ಣದ ಕಗ್ಗಲ್ಲನ್ನು ಇಲ್ಲಿಂದ ಮೂರು ಮೈಲಿ ದೂರದಲ್ಲಿ ಒಂದು ಗುಡ್ಡದ ತುದಿಯಲ್ಲಿ ಸ್ಥಾಪಿಸಿದ್ದಾರೆ. ಆ ಕಲ್ಲನ್ನು ನೋಡಬೇಕೆಂದು ಜನ ಹೋಗುತ್ತಾರೆ. ಆದರೆ ಆ ಕಲ್ಲು ಯಾರಿಗೂ ಕಾಣಿಸುವುದಿಲ್ಲ' ಎಂದ ಗುರು ಶಾಂತಿ.

'ಯಾಕೆ ಕಾಣಿಸುವುದಿಲ್ಲ?' ಅಭಿ ಕೇಳಿದ.

'ಕಲ್ಲಿಗೆ ಸುತ್ತುವರಿದು ಅಂಟಿಕೊಂಡು ಒಂದು ಮಹಾವೃಕ್ಷ ಬೆಳೆದಿದೆ. ಹಾಗಾಗಿ ಜನರು ಕಲ್ಲನ್ನು ಕಾಣದೆ ಇದೆಂಥಾ ಮರ!' ಎಂದು ಆಶ್ಚರ್ಯಪಟ್ಟು ಮರವನ್ನು ಮಾತ್ರ ನೋಡಿ ಹಿಂದಿರುಗುತ್ತಾರೆ' ಗುರು ಶಾಂತಿಯೆಂದ.

ಸ್ವಲ್ಪ ಹೊತ್ತು ಕಲ್ಲಿಗೆ ಮರ ಅಂಟಿಕೊಂಡಿರುವ, ಮರಕ್ಕೆ ಕಲ್ಲು ಅಂಟಿಕೊಂಡಿರುವ ವೃತ್ತಾಂತ ಕೇಳಿ ಹುಟ್ಟಿದ ಯೋಚನೆಯಲ್ಲಿ ಮೈಮರೆತಿದ್ದ ಅಭಿ ಎಚ್ಚತ್ತು, 'ಪರಿಪೂರ್ಣ ವೈರಾಗ್ಯದ ಸ್ವರೂಪ ಏನು ಗುರು ಶಾಂತಿ?' ಎಂದು ಕೇಳಿದ

ವೈರಾಗ್ಯದಲ್ಲಿ 'ಬೇಕು' ಎಂಬ ಅಪೇಕ್ಷೆಯೂ ಇರುವುದಿಲ್ಲ. 'ಬೇಡ' ಎಂಬ ಅಪೇಕ್ಷೆಯೂ ಇರುವುದಿಲ್ಲ. ವೈರಾಗ್ಯ ಪರಿಪೂರ್ಣ ನಿರಪೇಕ್ಷಾಭಾವವಾಗಿರುತ್ತದೆ'.

'ಮನುಷ್ಯನನ್ನು ದುರ್ಜನನಾಗಿಸುವುದು ಏನು ಗುರು ಶಾಂತಿ?' ಅಭಿ ಕೇಳಿದ.

ಗುರು ಶಾಂತಿಯೆಂದ, 'ಯಾವುದೇ ವ್ಯಾಧಿ ಮನುಷ್ಯನನ್ನು ದುರ್ಜನನ್ನಾಗಿಸದು. ಮನುಷ್ಯನ ಮಾನವೀಯ ಗುಣಗಳನ್ನು ಕೆಡಿಸುವ ವ್ಯಾಧಿ ಮನುಷ್ಯನಿಂದ ಅವನ ಒಳಗೇ ತಯಾರಾಗುತ್ತದೆ. ಎಷ್ಟೋ ಮಹಾತ್ಮರು ಸರಳವಾದ ಬದುಕಿನಲ್ಲಿರುವ ಆನಂದವನ್ನು ವಿಶ್ವಕ್ಕೆ ತಮ್ಮ ಬದುಕಿನ ಮೂಲಕವೇ ತೋರಿಸಿದರು. ಆದರೆ ಅತಿ ಸಣ್ಣ ಸಂಖ್ಯೆಯ ಮನುಷ್ಯರು ಮಾತ್ರ ಅದನ್ನು ಕಾಣುವ ಕಣ್ಣುಳ್ಳವರು. ಪರಿಪೂರ್ಣ ವೈರಾಗ್ಯದ ಕಣ್ಣಿಗೆ ಏನೂ ಕಾಣಿಸುವುದಿಲ್ಲ, ಇಂಥ ದಿನವೇ ಎನ್ನಲಾಗದ ತನ್ನ ಕೊನೆಯಲ್ಲಿರುವ ಶಾಂತಿ ಮತ್ತು ಆನಂದ ಮಾತ್ರ ಕಾಣಿಸುತ್ತದೆ'.

ಅಭಿ ಕೇಳಿದ, 'ಹುಟ್ಟಿನಲ್ಲಿ ಯಾರೂ ದುರ್ಜನ, ದುಷ್ಟ, ಭ್ರಷ್ಟ ಆಗಿರುವುದಿಲ್ಲ. ದುರ್ಜನ, ದುಷ್ಟ, ಭ್ರಷ್ಟರ ಸೃಷ್ಟಿಯಾಗುವುದು ಹೇಗೆ?'

'ಸಮಾಜದ ಆಲಸ್ಯ, ಉಪೇಕ್ಷೆ, ಮತ್ತು ದುಷ್ಕರ್ಮದ ಪ್ರತ್ಯಕ್ಷ ಮತ್ತು ಪರೋಕ್ಷ ಪೋಷಣೆಯಿಂದ ದುರ್ಜನರ, ದುಷ್ಟರ, ಭ್ರಷ್ಟರ ಸೃಷ್ಟಿಯಾಗುತ್ತದೆ. ಆದ್ದರಿಂದ ಇವರ ಸೃಷ್ಟಿಗೆ ಸಜ್ಜನರು ಮತ್ತು ದುರ್ಜನರು ಸಮಾನವಾಗಿ ಕಾರಣರಾಗುತ್ತಾರೆ. ಲೋಕದಲ್ಲಿ ಕುರುಬ ಕುರಿಗಳನ್ನು ನಿಯಂತ್ರಿಸುವ ಮತ್ತು ಕೊಲ್ಲುವ ಹಾಗೆ, ಅತ್ಯಂತ ಅಮಾನವೀಯವಾಗಿ ಮನುಷ್ಯರ ದೇಹವನ್ನೂ ಮನಸ್ಸನ್ನೂ ಆಳಿದ ನಿರಂಕುಶ ಪ್ರಭುಗಳು ಕೂಡ ಸಮಾಜದ ದೌರ್ಬಲ್ಯದ ಕಾರಣದಿಂದ ಸೃಷ್ಟಿಯಾದವರೇ ಆಗಿದ್ದಾರೆ. ಜನರು ನಿರ್ವೀರ್ಯರಾದರೆ, ಕುರಿಗಳಂತೆ ಬದುಕುವುದನ್ನೇ ಬದುಕುವವರಾದರೆ, ಶಕ್ತಿ ಸಾಮರ್ಥ್ಯವುಳ್ಳ ಕೆಲವರು ಜನರ ದೇಹ ಮತ್ತು ಮನಸ್ಸನ್ನು ತಮ್ಮ ನಿಯಂತ್ರಣದಲ್ಲಿಟ್ಟು ಕೊಳ್ಳುತ್ತಾರೆ. ಒಂದು ಪಕ್ಕದಲ್ಲಿ ಘೋರ ಭ್ರಷ್ಟಾಚಾರದಲ್ಲಿ ನಿರತನಾಗಿರುವವನು ಇನ್ನೊಂದು ಪಕ್ಕದಲ್ಲಿ ದೊಡ್ಡ ಗಾತ್ರದ 'ಒಳ್ಳೆಯ ಕೆಲಸ' ಮಾಡುತ್ತಾನೆ. ಕುರಿಗಳು ಹುಲ್ಲು ಮೇಯುವಂತೆ ಕೇವಲ ಫಲಾನುಭವಿಗಳಾಗಿರುವ ಪ್ರಜೆಗಳು ತಮಗೆ ಖುಷಿ ನೀಡುವ ಪಕ್ಕವನ್ನು ಮಾತ್ರ ಕಾಣುತ್ತಾರೆ. ಇದಕ್ಕೆ ಸಾವಿರ ಉದಾಹರಣೆಗಳನ್ನು ನೀಡಬಹುದು.

ಭ್ರಷ್ಟತೆಯ ಉಳಿವು ಮತ್ತು ಬೆಳವಣಿಗೆಯ ರಹಸ್ಯ ಇಷ್ಟೆ. ಸಮಾಜ ದುರ್ಬಲವಾಗಿ ಇರಬೇಕಾದ್ದು ಭ್ರಷ್ಟನ ಉಳಿವಿಗೆ ಅನಿವಾರ್ಯವಾಗಿರುತ್ತದೆ. ಆಡಳಿತವು ಪ್ರಜಾಸತ್ತೆ, ರಾಜ ಸತ್ತೆ, ನಿರಂಕುಶ ಪ್ರಭುತ್ವ ಯಾವುದೇ ಆಗಿರಲಿ, ಎಲ್ಲವೂ ಒಂದೇ' ಎಂದು ನಕ್ಕು ಮಾತು ಮುಗಿಸಿದ ಗುರು ಶಾಂತಿ, ತುಸು ತಡೆದು, 'ಜೇನುಹುಳುಗಳ ತೊಟ್ಟಿಯಂತೆ ನಿರಂತರ ಚಲನೆಯಲ್ಲೇ ಇರುವ ಈ ಜನಸಾಗರದಲ್ಲಿ ನೀವು ನಿಮ್ಮ ಅಪ್ಪನನ್ನು ಹುಡುಕುವುದಾದರೂ ಹೇಗೆ?'

ಅಭಿ ಮೌನವಾಗಿದ್ದ. ಆನೆಮಹಲಿನಿಂದ ಹೊರಟ ನಂತರ ಮೊಟ್ಟಮೊದಲ ಬಾರಿಗೆ ಅವನಿಗೆ ಅಳು ಬಂತು. ಮುಖ ಮುಚ್ಚಿಕೊಂಡು ಅಳತೊಡಗಿದ. ಕೂಡಲೇ ಅಳು ನಿಲ್ಲಿಸಿ, 'ನಿಜವಾಗಿಯೂ ನಾನು ಹುಚ್ಚ. ಆದರೂ ಅಪ್ಪ ಎಲ್ಲಾದರೊಂದು ಕಡೆ ಸಿಕ್ಕೇ ಸಿಗುತ್ತಾರೆ ಎನ್ನುವ ವಿಶ್ವಾಸ ನನಗೆ. ಇದು ಪ್ರೀತಿಯೋ ಮೋಹವೋ ನನಗೆ ತಿಳಿಯದು' ಎಂದ.

'ನಿನ್ನ ಪ್ರಯತ್ನ ಮುಂದರಿಯಲಿ. ಖಂಡಿತ ಯಶಸ್ಸು ಲಭಿಸುತ್ತದೆ. ಕಾಶಿ ವಾರಣಾಶಿಯಲ್ಲಿ ನನಗೆ ಕೆಲವು ಕನ್ನಡಿಗರು ಕಾಣಸಿಕ್ಕಿದ್ದಾರೆ. ನಾನು ಕನ್ನಡಿಗ ಹೌದೋ ಅಲ್ಲವೋ ನನಗೆ ಗೊತ್ತಿಲ್ಲ. ನಾನು ತಮಿಳುನಾಡಿನಲ್ಲಿ ಹುಟ್ಟಿ ಬೆಳೆದೆ. ತಮಿಳು ಕನ್ನಡ ಎರಡು ಭಾಷೆಯಲ್ಲಿಯೂ ಮಾತಾಡಬಲ್ಲೆ. ಓದಬಲ್ಲೆ, ಬರೆಯಬಲ್ಲೆ. ಅವೆರಡೂ ಸೋದರಿ ಭಾಷೆಗಳು. 'ಕನ್ನಡ ಇಡೀ ದೇಶದಲ್ಲಿ ಅತ್ಯಂತ ಸುಂದರವಾದ ಭಾಷೆ' ಎಂದು ತುಸು ಹೊತ್ತು ಧ್ಯಾನಿಸಿ ಗುರು ಶಾಂತಿ ಹೇಳಿದ, 'ಇಲ್ಲಿಗೆ ನೂರಾರು ಸಾವಿರಾರು ಮೈಲಿ ದೂರದಿಂದ ಜನರು ಯಾಕೆ ಬರುತ್ತಾರೆ ಗೊತ್ತೆ? ಪುಣ್ಯ ಸಂಪಾದನೆಗೆ, ಮನಃಶಾಂತಿಗೆ ಎಂಬುದೆಲ್ಲ ಬರೀ ಭ್ರಮೆ. ಅವರನ್ನು ಒಂದಲ್ಲ ಒಂದು ಕಡೆಗೆ ಸೆಳೆಯುತ್ತಾ ಇರುವುದು ಭ್ರಮೆ ಮತ್ತು ಮೋಹ. 'ದೇವರನ್ನು ಕಾಣಲು ಬಂದಿದ್ದೇನೆ' ಎಂಬುದು ಭ್ರಮೆಯ ಪರಾಕಾಷ್ಠೆ. ಮನುಷ್ಯ ತಾನೇನು ಕಾಣಬೇಕೆಂಬುದನ್ನು ಮನಸ್ಸಿನಲ್ಲಿ ಸೃಷ್ಟಿಸಿಕೊಂಡೇ ಮನೆಯಿಂದ ಹೊರಡುತ್ತಾನೆ ಮತ್ತು ಇಲ್ಲಿ ಬಂದು ಅದನ್ನು ಮಾತ್ರ ಕಾಣುತ್ತಾನೆ. ವಾಸ್ತವದಲ್ಲಿ ನೂರರಲ್ಲಿ ತೊಂಬತ್ತು ಮಂದಿ ಬದುಕಿನ ಒತ್ತಡವನ್ನು ತಾಳಿಕೊಳ್ಳಲಾರದೆ ಅದನ್ನು ಮರೆಯಲು ಬರುತ್ತಾರೆ. ಮನುಷ್ಯನಿಗೆ ಅಹಂ ಅರ್ಥಾತ್ 'ನಾನು' ಎಂಬ ಭಾವ ಬಹಳ ಒತ್ತಡವನ್ನು ಉಂಟುಮಾಡುತ್ತದೆ. ಇಲ್ಲಿಗೆ ಬಂದರೆ ಇಲ್ಲಿರುವಷ್ಟು ಸಮಯ ಆ ಭಾವ ಇರುವುದಿಲ್ಲ. ಯಾಕೆಂದರೆ, ಇಲ್ಲಿರುವುದು ಒಂದು ಬೃಹತ್ ಸಮೂಹ. ಇದರಲ್ಲಿ ನೀವು ನಿಮ್ಮನ್ನು ಸಹ ಗುರುತಿಸಲಾರಿರಿ. ಯಾಕೆಂದರೆ, ಅಹಂ ಅಥವಾ 'ನಾನು' ಎಂಬುದು ಇಲ್ಲಿ ಅದೃಶ್ಯವಾಗತ್ತದೆ. ಮನೆಗೆ ವಾಪಾಸಾದಾಗ ಅದು ಮರಳಿ ಬರುತ್ತದೆ. ಈ ಪ್ರಪಂಚದಲ್ಲಿ ಕೆಲವೇ ಮಂದಿ ಪರಿಪೂರ್ಣ ಏಕಾಂತವನ್ನು ಬಯಸುತ್ತಾರೆ ಮತ್ತು ಅದರಲ್ಲಿ ಇದ್ದುಕೊಂಡು ತಮ್ಮ ಇಚ್ಛೆಯ ಸತ್ಕರ್ಮದಲ್ಲಿ ನಿರತರಾಗಿರುತ್ತಾರೆ. ನೂರರರಲ್ಲಿ ತೊಂಬತ್ತು ಮಂದಿಗೆ ಏಕಾಂತ, ಒಂಟಿತನ ಅಸಹನೀಯ. ಅದನ್ನು ಸಹಿಸಿಕೊಳ್ಳಲು ಏನೇನೋ ಮಾಡುತ್ತಾರೆ. ದಿನವಿಡೀ ವಟಗುಟ್ಟುತ್ತಿರುತ್ತಾರೆ; ಸಂಗೀತವನ್ನು ಕರ್ಕಶ ಶಬ್ದಕ್ಕೆ ಪರಿವರ್ತಿಸಿ ಆಲಿಸುತ್ತಾರೆ. ಕಲಹ ಜಗಳ ಹೊಡೆದಾಟ ಬಡಿದಾಟ ಕೂಡ ಮಾಡುತ್ತಾರೆ. ಒಮ್ಮೊಮ್ಮೆ ದೇವರನ್ನು ಕಾಣಲು ಹೊರಡುತ್ತಾರೆ' ಗುರು ಶಾಂತಿ ನಕ್ಕ.

'ಯಾರಿಗಾದರೂ ದೇವರು ಕಾಣಿಸುತ್ತಾನೆಯೆ?' ಅಭಿ ಕೇಳಿದ.

'ಕಾಣಿಸುತ್ತಾನೆ. ಮನುಷ್ಯನೇ ನಿರ್ಮಿಸಿದ ಕಲ್ಲಿನ ಅಥವಾ ಲೋಹದ ಮೂರ್ತಿಯಲ್ಲಿ ಕಾಣಿಸುತ್ತಾನೆ. ಮೂರ್ತವಾದುದು ಅಮೂರ್ತವಾದುದು ಎರಡೂ ಒಂದೇ ಅಲ್ಲವೆ?' ಗುರು ಶಾಂತಿ ಮುಗುಳ್ನಗುತ್ತಾ ಕೇಳಿದ.

'ಹೌದು, ಒಂದೇ' ಅಭಿಯೆಂದ.

'ದೇವರು ಇರುವುದಾದರೆ, ಇರುವುದು ಮಣ್ಣಿನಲ್ಲಿ; ಕಲ್ಲಿನಲ್ಲಿ ಅಲ್ಲ, ಒಪ್ಪುತ್ತೀಯ?'

'ಒಪ್ಪುತ್ತೇನೆ'

'ಮನುಷ್ಯನನ್ನು ಗುರುತಿಸಬೇಕಾದ್ದು ಅವನ ನಂಬಿಕೆಗಳಲ್ಲಿ ಅಲ್ಲ. ಮನುಷ್ಯನನ್ನು ಗುರುತಿಸಬೇಕಾದ್ದು ಅವನ ಕರ್ಮದಲ್ಲಿ; ನಿಜವೆ?'

'ನಿಜ' ಎಂದು ಸ್ವಲ್ಪ ಹೊತ್ತು ಚಿಂತಿಸಿ, '"ಮನುಷ್ಯನ ವ್ಯಕ್ತಿತ್ವದಲ್ಲಿ ಸೌಂದರ್ಯ ಎಂಬುದು ಎಲ್ಲಿರುತ್ತದೆ?'

'ಮನುಷ್ಯನ ವ್ಯಕ್ತಿತ್ವದ ಸೌಂದರ್ಯ ಮುಖ್ಯವಾಗಿ ಅವನ ನಡೆನುಡಿಯಲ್ಲಿರುತ್ತದೆ. ಅದಕ್ಕಿಂತ ಹೆಚ್ಚು ಅವನ ಮೌನದಲ್ಲಿರುತ್ತದೆ'.

ಅರ್ಥವಾಗಲಿಲ್ಲ ಎಂಬ ಭಾವದಿಂದ ಅಭಿ ಗುರು ಶಾಂತಿಯನ್ನೇ ದಿಟ್ಟಿಸಿದ.

**(ಸಶೇಷ)**